ಈ ದೇಶದ ಗೌರವಾನ್ವಿತ ಪ್ರಧಾನ ಮಂತ್ರಿಯವರಾದ ಡಾ॥ ಮನಮೋಹನ್ ಸಿಂಗ್‌ರವರು ಈ malnutrition ಸಲುವಾಗಿ ಸಾಕಷ್ಟು ಕಳವಳವನ್ನು ಮೂರು ಬಾರಿ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ತಮ್ಮ public speech ನಲ್ಲಿ ಹೇಳಿದ್ದಾರೆ. ಮಾನ್ಯ ರೋಷನ್‌ಬೇಗ್‌ರವರಿಗೆ ಬೇಕಾದರೆ I will get you that report. ತಮ್ಮ ಸಹಾಯವನ್ನು Unit Cost ಖರ್ಚು ಮಾಡುವುದಕ್ಕೆ ಮಾನ್ಯ ವಿರೋಧ ಪಕ್ಷದ ಸದಸ್ಯರು ತಮ್ಮ ಪ್ರಭಾವವನ್ನು ಬೀರಬೇಕಾಗಿ ನಾನು ಕೇಳಿಕೊಳ್ಳುತ್ತೇನೆ.

ಹಿಂದುಳಿದ ವರ್ಗಗಳ ಅಲ್ಪಸಂಖ್ಯಾತರ ಬಾಲಕರ ವಸತಿ ನಿಲಯದ ಕಟ್ಟಡ ನಿರ್ಮಾಣ

40 (517) ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ) (ದೇವರ ಹಿಪ್ಪರಗಿ) :– ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬಿಜಾಪುರ ಜಿಲ್ಲೆಯ ದೇವರಹಿಪ್ಪರಗಿ ಮತಕ್ಷೇತ್ರ ವ್ಯಾಪ್ತಿಯ ಭೈರವಾಡಗಿ ಗ್ರಾಮದಲ್ಲಿ ಮೆಟ್ರಿಕ್ ವಿದ್ಯಾರ್ಥಿಗಳ ಹಿಂದುಳಿದ ವರ್ಗಗಳ ಅಲ್ಪಸಂಖ್ಯಾತರ ಬಾಲಕರ ವಸತಿ ನಿಲಯ ಕಟ್ಟಡ ಮಂಜೂರು ಮಾಡಲಾಗಿದೆಯೇ;

ಆ) ಮಾಡಿದ್ದಲ್ಲಿ, ಸದರಿ ಕಟ್ಟಡ ಯಾವ ವರ್ಷದಲ್ಲಿ ಮಂಜೂರು ಮಾಡಲಾಗಿದೆ, ಮತ್ತು ಇದಕ್ಕೆ ಮಂಜೂರಾಗಿರುವ ಅನುದಾನವೆಷ್ಟು, ಸದರಿ ಕಟ್ಟಡ ನಿರ್ಮಾಣ ಯಾವ ಏಜೆನ್ಸಿಗೆ ನೀಡಲಾಗಿದೆ, ಮತ್ತು ಕಟ್ಟಡ ನಿರ್ಮಾಣ ಮಾಡಲು ನೀಡಿರುವ ಮಾನದಂಡನೆಗಳೇನು;

ಇ) ಸದರಿ ಗ್ರಾಮದಲ್ಲಿ ಇದೂವರೆಗೂ ವಸತಿ ನಿಲಯದ ಕಟ್ಟಡ ನಿರ್ಮಾಣವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ ಕಟ್ಟಡ ನಿರ್ಮಾಣ ಮಾಡದೇ ಇರಲು ಕಾರಣವೇನು;

ಉ) ಸದರಿ ಕಟ್ಟಡ ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು, ಸಂಪೂರ್ಣ ವಿವರ ನೀಡುವುದು?

ಶ್ರೀ ಎ. ನಾರಾಯಣ ಸ್ವಾಮಿ :– (ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು):–

ಅ) ಹೌದು

ಆ) ಭೈರವಾಡಗಿ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲು ಕಾರ್ಯದೇಶವನ್ನು ದಿನಾಂಕ 12–03–2008ರಲ್ಲಿ ನೀಡಲಾಗಿತ್ತು. ಈ ಕಟ್ಟಡದ ಗುತ್ತಿಗೆ ಮೊತ್ತ ರೂ. 70.01 ಲಕ್ಷಗಳಾಗಿರುತ್ತದೆ. ಕಟ್ಟಡ ನಿರ್ಮಾಣವನ್ನು ಮೆ॥ ನಾಗಾರ್ಜುನ ಕನ್ಸ್‌ಟ್ರಕ್ಷನ್ಸ್ ಕಂಪನಿ ಲಿ., ಬೆಂಗಳೂರು ಇವರಿಗೆ ವಹಿಸಲಾಗಿತ್ತು.

ಇ) ಹೌದು

ಈ) ಆ ಪ್ರದೇಶಗಳಲ್ಲಿನ ಕೆಲವು ಗ್ರಾಮಗಳನ್ನು ಸ್ಥಳಾಂತರಿಸಲು ತೀರ್ಮಾನಿಸಲಾಗಿದ್ದ ಹಿನ್ನೆಲೆಯಲ್ಲಿ ಈ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣವನ್ನು ರದ್ದುಪಡಿಸಲಾಗಿದೆ.

ಉ) ಕಾರ್ಯಾದೇಶ ರದ್ದುಪಡಿಸಿದ್ದರಿಂದ, ಮತ್ತೆ ಆ ಪ್ರದೇಶದಲ್ಲಿ ವಿದ್ಯಾರ್ಥಿನಿಲಯ ಕಟ್ಟಡದ ಅವಶ್ಯಕತೆ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

40 (517) ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) :– ಮಾನ್ಯ ಉಪಾಧ್ಯಕ್ಷರೆ, ಈ ಸರ್ಕಾರ ಬಂದ ಮೇಲೆ ನಾವೇನು ಈ ಕಡೆ ಕುಳಿತಿದ್ದೇವೆ, ಹಾಸ್ಟೆಲ್ ಕೇಳಿದೆವು ಕೊಡಲಿಲ್ಲ. ಕಾಲೇಜು ಕೇಳಿದ್ದೇವೆ, ಕೊಡಲಿಲ್ಲ. ರಸ್ತೆ ಕೇಳಿದ್ದೇವೆ, ಅದನ್ನೂ ಕೊಡಲಿಲ್ಲ. ರಂಗಮಂದಿರವನ್ನು ಕೇಳಿದ್ದೇವೆ, ಅದನ್ನೂ ಕೊಡಲಿಲ್ಲ. ನೀರು ಕೇಳಿದೆವು, ಅದನ್ನೂ ಕೊಡಲಿಲ್ಲ, ಬೇಡ. ಕೊಡುವುದು ಬೇಡ. ಆದರೆ 2007–08 ರಲ್ಲಿ ಹಿಂದಿನ ಸರ್ಕಾರ ನನ್ನ ಕ್ಷೇತ್ರದ ಭೈರವಾಡಗಿ ಗ್ರಾಮಕ್ಕೆ ಕೊಟ್ಟಿರತಕ್ಕಂತಹ Metric Hostel, ಅನ್ನು ಮಂಜೂರು ಮಾಡಿ ಟೆಂಡರ್ ಆಗಿದೆ. 70 ಲಕ್ಷ ರೂಪಾಯಿಗೆ ಟೆಂಡರ್ ಆಗಿದೆ. M/s. Nagarjuna Construction Company ಗೆ ಟೆಂಡರ್ ಕೂಡ ಆಗಿತ್ತು. ಈ ಸರ್ಕಾರ ಬಂದ ಮೇಲೆ ಅದನ್ನು ರದ್ದು ಮಾಡಿದ್ದಾರೆ. ಏಕೆ ರದ್ದು ಮಾಡಿದ್ದಾರೆ ಎಂದು ಕೇಳಿದರೆ ಸುಳ್ಳು ಉತ್ತರ ಕೊಡುತ್ತಾರೆ. ಏನೆಂದು ಹೇಳುತ್ತಾರೆಂದರೆ ಈ ಗ್ರಾಮವನ್ನು ಸ್ಥಳಾಂತರ ಮಾಡುವ ವ್ಯಾಪ್ತಿಗೆ ಬರುತ್ತಿತ್ತು. ಅದಕ್ಕೆ ಇದನ್ನು ರದ್ದು ಮಾಡಲಾಗಿದೆ ಎಂದು ಹೇಳುತ್ತಾರೆ ಮತ್ತು ಸದರಿ ಕಟ್ಟಡವನ್ನು ಪ್ರಾರಂಭ ಮಾಡಿ ಪೂರ್ಣಗೊಳಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು

ಕೇಳಿದರೆ ಕಾರ್ಯದೇಶ ರದ್ದುಪಡಿಸಿರುವುದರಿಂದ, ಮತ್ತೆ ಈ ಪ್ರದೇಶದಲ್ಲಿ ವಿದ್ಯಾರ್ಥಿ ನಿಲಯ ಕಟ್ಟಡದ ಅವಶ್ಯಕತೆ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಅಂದರೆ ಹಿಂದೆ ಸರ್ಕಾರ ಕೊಟ್ಟಿರತಕ್ಕಂತಹ ವಿಚಾರದಲ್ಲಿ ಎಲ್ಲಾ ಪರಿಶೀಲನೆ ಮಾಡಿ ಅಲ್ಲೇನು ಆ ಗ್ರಾಮದಲ್ಲಿ ಹಾಸ್ಟೆಲ್ ಕೊಟ್ಟಿತ್ತು? ಸುಮಾರು 600 ಜನ ಹೈಸ್ಕೂಲು ಮಕ್ಕಳು ಓದುತ್ತಾರೆ. ಆದರೆ ಈ ರೀತಿಯಾಗಿ ನಮಗೆ ನೀವು ಅನ್ಯಾಯ ಮಾಡುವುದನ್ನು ನೋಡಿದರೆ ನಿಜವಾಗಲೂ ಕೂಡ ನನಗೆ ಬಹಳ ನೋವಾಗಿದೆ. ಅಲ್ಲಿ sanction ಆಗಿ ಟೆಂಡರ್ ಆಗಿರುವುದನ್ನು cancel ಮಾಡುತ್ತೀರೆಂದರೆ ಇದು ಯಾವ ನ್ಯಾಯ ಎಂದು ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ. ಅಲ್ಲಿ ಮತ್ತೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಆ ಊರು ಸ್ಥಳಾಂತರ ಆಗುತ್ತದೆಂದು ಮಾಹಿತಿ ಕೊಟ್ಟಿದ್ದಾರೆ. ಆ ಊರಿಗೆ ನೀರೇ ಬಂದಿಲ್ಲ. ಕುಡಿಯುವ ನೀರು ಇಲ್ಲ. ಅಲ್ಲಿ ಸ್ಥಳಾಂತರ ಮಾಡುವ ಪ್ರಶ್ನೆ ಎಲ್ಲಿ ಬರುತ್ತದೆ? ಅದಕ್ಕೆ ತಕ್ಷಣ ಇವತ್ತೇನು ಹಿಂದೆ ರದ್ದು ಮಾಡಿರುವ ಆದೇಶವನ್ನು cancel ಮಾಡಬೇಕು ಮತ್ತು ತಕ್ಷಣ ಅಲ್ಲಿಗೆ ಹಿಂದಿನ ಸರ್ಕಾರ ಕೊಟ್ಟಿರತಕ್ಕಂತಹ ಹಾಸ್ಟೆಲ್‌ಗೆ ಮಂಜೂರಾತಿ ಕೊಡುತ್ತೇವೆಂದು ಸರ್ಕಾರ ಸ್ಪಷ್ಟವಾಗಿ ಉತ್ತರ ಕೊಡಬೇಕು. ಒಂದು ವೇಳೆ ಸರ್ಕಾರ ಉತ್ತರ ಕೊಡದೇ ಹೋದರೆ ನಾನು ಧರಣಿ ಮಾಡಬೇಕಾಗುತ್ತದೆ ಎನ್ನತಕ್ಕದ್ದನ್ನು ಮಾನ್ಯ ಮಂತ್ರಿಗಳಿಗೆ ವಿನಂತಿ ಮಾಡಬೇಕಾಗುತ್ತದೆ.

ಶ್ರೀ ಎ. ನಾರಾಯಣ ಸ್ವಾಮಿ (ಮಾನ್ಯ ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು):– ಸನ್ಮಾನ್ಯ ಉಪಾಧ್ಯಕ್ಷರೆ, ಅವರ ಕ್ಷೇತ್ರದಲ್ಲಿ 8 hsotel ಗಳಿವೆ. 7 hostel ಗಳು ಸ್ವಂತ ಕಟ್ಟಡದಲ್ಲಿದ್ದಾವೆ. ಮತ್ತೊಂದು hostel ದೋಣಿ ನದಿ ತೀರದಲ್ಲಿದೆ. ಪ್ರತಿ ಬಾರಿ ಪ್ರವಾಹ ಬಂದಾಗ ನೀರು ಮುಳುಗಡೆ ಆಗುತ್ತದೆ. ಮಕ್ಕಳು ವಾಸ ಮಾಡುವುದಕ್ಕೆ ಯೋಗ್ಯವಾಗಿಲ್ಲದ ಸ್ಥಳ ಅದು. ಆದ್ದರಿಂದ ಈಗಾಗಲೇ ಅದಕ್ಕೆ contract ಆಗಿತ್ತು, ಟೆಂಡರ್ ಆಗಿತ್ತು, ಕಟ್ಟಬೇಕಾದ ಸ್ಥಳವನ್ನು ಹೋಗಿ ನೋಡಿದಾಗ ಅದು ಕಟ್ಟಲು ಯೋಗ್ಯವಾಗಿರಲಿಲ್ಲ. ಅದಕ್ಕೋಸ್ಕರ ಸ್ಥಳಾವಕಾಶವನ್ನು ಕೊಡಬೇಕು, ಹೊಸ ಜಾಗವನ್ನು ಕೊಡಬೇಕೆಂದು ಕೇಳಿದ್ದೇವೆ. ಹೊಸ ಜಾಗವನ್ನು ಕೊಟ್ಟರೆ ನಾವು ತಕ್ಷಣ ಪ್ರಾರಂಭ ಮಾಡುತ್ತೇವೆ. ಸ್ಥಳ ಕೊಡದೇ ಕಟ್ಟಡವನ್ನು ಕಟ್ಟಿ ಎಂದರೆ ಹೇಗೆ? ಸ್ಥಳ ಕೊಡಿ.

ಉಪಾಧ್ಯಕ್ಷರು : ಜಾಗ ತೋರಿಸಿ.

ಶ್ರೀ ಎ. ನಾರಾಯಣ ಸ್ವಾಮಿ : ನನ್ನ ಇಲಾಖೆಯಲ್ಲಿ ಹಣದ ಕೊರತೆ ಇಲ್ಲ, ಶಾಸಕರು ಸ್ಪಂದಿಸಬೇಕು ಅಷ್ಟೇ.

ಶ್ರೀ ಎ.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನನಗೆ ಆ hostel ಎಲ್ಲಿಗೆ ಹೋಗಿದೆ ಎಂದು ಗೊತ್ತಿದೆ, ನಾನು ಇಲ್ಲಿ ಚರ್ಚೆ ಮಾಡಲು ಹೋಗುವುದಿಲ್ಲ. ಇರುವ hostel ಎಲ್ಲಿಗೆ ಹೋಗಿದೆ ಎಂದು ನನಗೆ ಗೊತ್ತಿದೆ. ಅದಕ್ಕೆ ಬಹಳ ಜಾಸ್ತಿ ಚರ್ಚೆ ಬೇಡ. ನಾನು ಹೇಳುವುದು ಏನೆಂದರೆ ಆ ಊರು ಮುಳುಗಡೆ ಆಗಿಲ್ಲ. ಮಾನ್ಯ ಗೋವಿಂದ ಕಾರಜೋಳ್ ಅವರು ಉಸ್ತುವಾರಿ ಸಚಿವರಾಗಿದ್ದರು. ಅವರೇ ಲಿಸ್ಟ್ ಮಾಡಿದ್ದಾರೆ. ಭೈರವಾಡಗಿ ಊರು ಯಾವತ್ತೂ ಮುಳುಗಡೆ ಆಗಿಲ್ಲ. ದೋಣಿ ನದಿ ದಂಡೆಗೆ ಇರಬಹುದು, ಆದರೆ ಅಲ್ಲಿಗೆ ಯಾವತ್ತೂ ನೀರು ಬಂದಿಲ್ಲ.

ಶ್ರೀ ಎ. ನಾರಾಯಣ ಸ್ವಾಮಿ : ದಯವಿಟ್ಟು ಬೇರೆ ಸ್ಥಳ ಕೊಡಿ, ಹೊಸದಾಗಿ ಕಟ್ಟುತ್ತೇವೆ.

ಶ್ರೀ ಎ.ಎಸ್. ಪಾಟೀಲ್ : ನದಿ ಮುಳುಗಡೆ ನಿಮಗೆ ಹೇಗೆ ಗೊತ್ತಾಗುತ್ತದೆ? ನಾನು ಆ ಕ್ಷೇತ್ರದಲ್ಲಿದ್ದೇನೆ. ಪ್ರತಿ ನಿತ್ಯ ಊರಿಗೆ ಹೋಗುತ್ತೇನೆ. ನಾನು ಎಂ.ಎಲ್.ಎ., ಜಮೀನು ಖರೀದಿ ಮಾಡಿಕೊಡಬೇಕಾ? ಈ ರೀತಿ ಹಿಂದಿನ ಸರ್ಕಾರ ಮಾಡಿರತಕ್ಕಂತಹದ್ದನ್ನು ನೀವು cancel ಮಾಡಿದ್ದೀರಿ. ನಮಗೆ ಅನ್ಯಾಯ ಮಾಡುತ್ತಿದ್ದೀರಿ.

ಶ್ರೀ ಎ. ನಾರಾಯಣಸ್ವಾಮಿ : ಅಲ್ಲಿ hostel shift ಮಾಡಲಿಲ್ಲ. ಸ್ಥಳವನ್ನು ಹುಡುಕುತ್ತಿದ್ದೇವೆ. ಸ್ಥಳ ಕೊಟ್ಟರೆ ತಕ್ಷಣ ಪ್ರಾರಂಭ ಮಾಡುತ್ತೇವೆ.

ಶ್ರೀ ಎ.ಎಸ್ ಪಾಟೀಲ್ : Sanction ಮಾಡಿಸಿಕೊಡಿ. ಸ್ಥಳ ಕೊಡದೇ ಹೋದರೆ ರದ್ದಾಗುತ್ತದೆ. ಸ್ಥಳ ಎಲ್ಲಾ hostel ಗೆ ಕೊಡಬೇಕಾ?

ಶ್ರೀ ಸಿದ್ದರಾಮಯ್ಯ : ಮಾನ್ಯ ಸಚಿವರೇ, ಮಾನ್ಯ ಸದಸ್ಯರ concern ಏನೆಂದರೆ 2008ರಲ್ಲೇ ಕಾರ್ಯಾದೇಶ ಆಗಿದೆ. ಅಂದರೆ administrative orders ಎಲ್ಲಾ ಕೊಟ್ಟಿದ್ದೀರಿ. 2008 ಅಂದರೆ more than three years ಆಯಿತು. ಹತ್ತಿರ ಹತ್ತಿರ ನಾಲ್ಕು ವರ್ಷ ಆಯಿತು. ಅದಾದ ಮೇಲೆ ಅಲ್ಲಿ ಪ್ರವಾಹ ಬರುತ್ತದೆ, ಕಟ್ಟಡ ಕಟ್ಟಲು ಯೋಗ್ಯ ಇಲ್ಲ ಎಂದ ಮೇಲೆ ನಿಮ್ಮ ಇಲಾಖೆ ಸಂಬಂಧಪಟ್ಟವರು hostel ಕಟ್ಟಲು alternative ಜಾಗವನ್ನು ಹುಡುಕಬೇಕಲ್ಲ? Hostel ಮಂಜೂರಾಗಿ ಬಿಟ್ಟಿದೆ. Orders issue ಆಗಿದೆ. ಆಮೇಲೆ

ಇವರಿಗೆ ಅಲ್ಲಿ ಕಟ್ಟುವುದಕ್ಕೆ ಆಗುವುದಿಲ್ಲವೆಂದು ಗೊತ್ತಾದ ಮೇಲೆ should they not find out an alternative place? ನಾಲ್ಕು ವರ್ಷಗಳು ಬೇಕಾ? ಆಮೇಲೆ ಅವರು ಸರ್ಕಾರಕ್ಕೆ ರಿಪೋರ್ಟ್ ಕೊಟ್ಟಿದ್ದಾರಾ? ಅಲ್ಲಿ ಆಗುವುದಿಲ್ಲ, ಬೇರೆ ಜಾಗ ಇದೆ ಎಂದು ಇದೆಯೆ? Why the Government is sleeping over the matter since more than three years? ಒಂದು ನಿಮಿಷ ಇರಿ. ಮೂರು ವರ್ಷ ಬೇಕಾ? ಏನೋ ಆರು ತಿಂಗಳಾಗಿದೆ ಎಂದರೆ, ಮೂರು ತಿಂಗಳಾಗಿದೆ ಎಂದರೆ I can understand. ಮೂರು ವರ್ಷ, ಹತ್ತಿರ, ಹತ್ತಿರ ನಾಲ್ಕು ವರ್ಷ ಆಗಿದೆ. ಮಾರ್ಚ್ ತಿಂಗಳು 2008ರಲ್ಲಿ ಇವರಿಗೆ orders ಆಗಿದೆ. ಅವತ್ತಿನಿಂದ ಸಮಯ ಬೇಕಾ ಮಾನ್ಯ ಮುಖ್ಯಮಂತ್ರಿಗಳೇ? ಹಾಗಾದರೆ ಇಲಾಖೆ ಏನು ಮಾಡುತ್ತಿದೆ? what is the department doing? ಇವರು ಎಷ್ಟು ದಿನದ ತನಕ ಕಟ್ಟುತ್ತಾರೆ, ಕಟ್ಟುತ್ತಾರೆ ಅಥವಾ alternative ಜಾಗ ಹುಡುಕುತ್ತಾರೆ ಅಂದರೆ ನಮಗೆ ಜಾಗ ಸಿಕ್ಕಿಲ್ಲ, ನಾವು ಕಟ್ಟಿಲ್ಲ ಎಂದು ಹೇಳುತ್ತಾರೆ. ಅಲ್ಲಿ ಪ್ರವಾಹ ಬಂದಿದೆ ಎಂದರೆ ಅಲ್ಲಿನ ಮಕ್ಕಳಿಗೆ hostel facilities ಬೇಕು ಎಂದು ನೀವು ಪತ್ತೆ ಹಚ್ಚಿ ಆದೇಶ ಮಾಡಿದ ಮೇಲೆ ಆ ಮಕ್ಕಳ ಗತಿ ಏನು? ಅಲ್ಲವಾ, ಅವರಿಗೆ ಇಲ್ಲಿಯವರೆಗೆ ಅನ್ಯಾಯ ಆಗಿಲ್ಲವೇ? ಅನ್ಯಾಯಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡುವುದು? ನೀವಂತೂ ಈಗ ಬಂದಿದ್ದೀರಿ. You are also held responsible. ಆದ್ದರಿಂದ ಕೂಡಲೇ ನೀವು ಹೋಗಿ ಸ್ಥಳ ಪರಿಶೀಲನೆ ಮಾಡಿ. ಆ ಕ್ಷೇತ್ರಕ್ಕೆ ಹೋಗಿ. ಸ್ಥಳ ಪರಿಶೀಲನೆ ಮಾಡಿ, ಅದನ್ನು ಕೂಡಲೇ ಕಟ್ಟಲಿಕ್ಕೆ ಕ್ರಮ ತೆಗೆದುಕೊಳ್ಳಿ.

ಶ್ರೀ ಎ. ನಾರಾಯಣ ಸ್ವಾಮಿ : ಸಾರ್, ನಾನು ಶಾಸಕರ ಸಹಕಾರವನ್ನು ಮಾತ್ರ ಕೇಳಿದೆ. ಎಲ್ಲಾ ಜಿಲ್ಲೆಗಳಿಗೆ ಭೇಟಿ ನೀಡಿದ್ದೇನೆ. ಸಂಪೂರ್ಣ ಮಾಹಿತಿಯೊಂದಿಗೆ ಜಿಲ್ಲಾ ಕೇಂದ್ರಗಳಿಗೆ ಹೋಗಿದ್ದೇನೆ. ಜಿಲ್ಲಾಧಿಕಾರಿಗಳಿಗೆ ತಾಕೀತು ಮಾಡಿದ್ದೇನೆ. ನಮ್ಮ ಅಧಿಕಾರಿಗಳು ಸಹಕಾರ ಕೊಡುತ್ತಿದ್ದಾರೆ. ಎಲ್ಲಿ ಸರ್ಕಾರಿ ಜಾಗ ಸಿಗುವುದಿಲ್ಲ, ಅಲ್ಲಿ ಇಲಾಖೆಯಿಂದ purchase ಮಾಡುತ್ತಾರೆ. ಖಂಡಿತವಾಗಿ ಜಿಲ್ಲಾಧಿಕಾರಿಗಳಿಗೆ ಆದೇಶ ಮಾಡಿದ್ದೇನೆ.

ಶ್ರೀ ಸಿದ್ದರಾಮಯ್ಯ : ಮೂರೂವರೆ ವರ್ಷ ಆಗಿದೆ.

ಶ್ರೀ ಎ. ನಾರಾಯಣ ಸ್ವಾಮಿ : ಸಾರ್, ಹಿಂದೆ ಪ್ರವಾಹ ಬಂದ ಮೇಲೆ ಸಮಸ್ಯೆಗಳು ಆಗಿವೆ. ನಾನೀಗ ಮಾಹಿತಿಯನ್ನು ಪಡೆದಿದ್ದೇನೆ. ಜಿಲ್ಲಾಧಿಕಾರಿಗಳಿಗೆ ಕಟಾಫ್ ಡೇಟ್ ಕೊಟ್ಟಿದ್ದೇನೆ. ಇನ್ನು ಎರಡು ತಿಂಗಳಲ್ಲಿ ಕೊಡಲೇಬೇಕೆಂದು ಹೇಳಿದ್ದೇನೆ. ನಾನು

ತೆಗೆದುಕೊಳ್ಳುತ್ತೇನೆ. ಶಾಸಕರು ಅದರ ಕಡೆಗೆ ಗಮನ ಕೊಡಲಿ ಎಂದು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ಅವರು co-operate ಮಾಡುತ್ತಾರೆ.

ಶ್ರೀ ಎ. ನಾರಾಯಣ ಸ್ವಾಮಿ : ಖಂಡಿತವಾಗಿ ಆದಷ್ಟು ಬೇಗ ನಿವೇಶನವನ್ನು ಪಡೆದು ನಿರ್ಮಾಣವನ್ನು ಮಾಡುತ್ತೇವೆ.

ಶ್ರೀ ಎ.ಎಸ್. ಪಾಟೀಲ್ : ನಾನು ಹೆಚ್ಚಿಗೆ ಕೇಳುವುದಿಲ್ಲ. ನೀವು ಅಲ್ಲಿ hostel sanction ಮಾಡಿ ಕೊಡುತ್ತೀರೋ ಇಲ್ಲವೋ, ಇದು ಮೊದಲನೆಯದು, ಎರಡನೆಯದು, ಎಂದರೆ ಅಲ್ಲಿ ನೀರು ಬಂದಿದೆ, ದೋಣಿ ಎಲ್ಲಾ ಮುಳುಗುತ್ತದೆ ಎಂದರೆ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ಕುಳಿತಿದ್ದಾರೆ. ಮತ್ತೆ ಆ ದೋಣಿ ಬಂದಂತ ಸಂದರ್ಭದಲ್ಲಿ ಊರುಗಳನ್ನು ಸ್ಥಳಾಂತರ ಮಾಡಲು ಪಟ್ಟಿ ಮಾಡಿರತಕ್ಕಂತಹ ಹಿಂದಿನ ಉಸ್ತುವಾರಿ ಸಚಿವರು ಕುಳಿತಿದ್ದಾರೆ. ಆ ಊರಿಗೆ ನೀರೇ ಬಂದಿಲ್ಲ. ಆ ಊರು ಸ್ಥಳಾಂತರವೇ ಆಗಿಲ್ಲ. ಅಲ್ಲಿ ಏನು ಇದೆ ಅಂದರೆ ಅಲ್ಲಿ ಎರೆ ಮಣ್ಣಿದೆ. ಸ್ವಲ್ಪ ಆಳ ಜಾಸ್ತಿ ತೆಗೆಯಬೇಕು. ಅದಕ್ಕೆ ಒಂದು ಹತ್ತು ಲಕ್ಷ ರೂಪಾಯಿ ಜಾಸ್ತಿ sanction ಮಾಡಬೇಕು, ಅಷ್ಟನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಅದಕ್ಕೆ ಈ ರೀತಿ ಉತ್ತರ ಕೊಟ್ಟರೆ ಸಮಾಧಾನ ಆಗುವುದಿಲ್ಲ. ನೀವು ಅದಕ್ಕೆ ಮಂಜೂರಾತಿ ಕೊಡುತ್ತೀರೋ ಇಲ್ಲವೋ ಹೇಳಿ. ನೀವು ಈಗ ರದ್ದು ಮಾಡಿದ್ದೀರಿ. ಅದು ಮುಖ್ಯವಾದುದು. ಆ ಗ್ರಾಮಕ್ಕೆ ನೀವು ಕೊಡುತ್ತೀರಿ ಎನ್ನುವುದಾದರೆ ನೀವು ಎಷ್ಟು ಜಾಗವನ್ನು ಕೇಳುತ್ತೀರಿ, ಖಂಡಿತವಾಗಿ ಜಾಗ ಕೊಡಿಸಲು ಏನೂ problem ಇಲ್ಲ. ನಾನು ಸಹಕಾರ ಕೊಡಲು ರೆಡಿ ಇದ್ದೇನೆ. ಜಾಗ ಕೂಡ ಅಲ್ಲಿ ರೆಡಿ ಇದೆ. ಈಗಾಗಲೇ ಹೈಸ್ಕೂಲಿಗೆ ಜಾಗ ಕೊಟ್ಟು ಹೊಸ ಹೈಸ್ಕೂಲಿನ ಹತ್ತು ರೂಮುಗಳನ್ನು ಕಳೆದ ವರ್ಷ ಕಟ್ಟಿಸಿದ್ದೇವೆ. ಅಲ್ಲಿ ಕಟ್ಟಡ ನಡೆಯುತ್ತಿದೆ. ಹೊಸ ಕಾಲೇಜು ಈಗಾಗಲೇ ಪೂರ್ತಿ ಆಗಲಿಕ್ಕೆ ಬಂದಿದೆ. ಅದಕ್ಕೆ ನಿಮ್ಮನ್ನು ನಾನು ಕೇಳಿದ್ದು ಅಷ್ಟೇ.

ಶ್ರೀ ಎ. ನಾರಾಯಣ ಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನಾನೇ ಸ್ಥಳಕ್ಕೆ ಭೇಟಿ ನೀಡುತ್ತೇನೆ. ಸ್ಥಳ ಸಿಕ್ಕ ನಂತರ ತಕ್ಷಣ ಪ್ರಾರಂಭ ಮಾಡುತ್ತೇವೆ.

ಶ್ರೀ ಎ.ಎಸ್. ಪಾಟೀಲ್ : ಸ್ಥಳ ಕೊಡಿಸಿದರೆ ಎಂದು ಕಂಡೀಷನ್ ಅಲ್ಲ. ನೀವು ಅಲ್ಲಿ hostel sanction ಮಾಡಿಸಿದರೆ ಜಾಗವನ್ನು ಕೊಡುತ್ತಾರೆ. ನೀವು ಮೊದಲು hostel

sanction ಮಾಡಬೇಕಲ್ಲ.

ಶ್ರೀ ಸಿದ್ದರಾಮಯ್ಯ : ನಿಮ್ಮ ಆದೇಶ ರದ್ದಾಗಿದೆ. ಹೊಸ ಆದೇಶ ಆಗಬೇಕು.

ಶ್ರೀ ಎ.ಎಸ್. ಪಾಟೀಲ್ : ರದ್ದು ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ : ಆದೇಶ ಮಾಡುತ್ತೇನೆಂದು ಹೇಳಿ.

ಶ್ರೀ ಎ. ನಾರಾಯಣ ಸ್ವಾಮಿ : ನಾನು ಸ್ಥಳಕ್ಕೆ ಭೇಟಿ ನೀಡುತ್ತೇನೆ, ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ಆದೇಶ ಮಾಡುತ್ತೇನೆಂದು ಹೇಳಿ.

ಶ್ರೀ ಎ. ನಾರಾಯಣ ಸ್ವಾಮಿ : ನಾನು ಆದೇಶ ಮಾಡದೇ ಬರುತ್ತೇನಾ ?

ಶ್ರೀ ಎ.ಎಸ್ ಪಾಟೀಲ್ : ಅಲ್ಲಿ deep ಅಗಿ foundation ಹೋಗುತ್ತದೆ.

ಶಕ್ತಿ ಗಣಪತಿ ನಗರದಲ್ಲಿ/ಶಂಕರ್‌ನಾಗ್ ಬಸ್ ನಿಲ್ದಾಣ ನಿರ್ಮಿಸುವುದು

41 (509) ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) :– ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಹಾಲಕ್ಷ್ಮಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಸಂ. 74 ಶಕ್ತಿ ಗಣಪತಿ ನಗರದಲ್ಲಿ ಶಂಕರ್‌ನಾಗ್ ಬಸ್ ನಿಲ್ದಾಣವನ್ನು ನಿರ್ಮಿಸಲು ಸರ್ಕಾರದ ಗಮನದಲ್ಲಿದೆಯೇ ;

ಆ) ಹಾಗಿದ್ದಲ್ಲಿ, ಸದರಿ ಬಸ್ ನಿಲ್ದಾಣವನ್ನು ಎಂದು ನಿರ್ಮಿಸಲಾಗುವುದು ಮತ್ತು ಸಾರ್ವಜನಿಕ ಉಪಯೋಗಕ್ಕಾಗಿ ಯಾವಾಗ ಲಭ್ಯವಾಗಲಿದೆ.

ಇ) ಶಂಕರ್‌ನಾಗ್ ಬಸ್ ನಿಲ್ದಾಣದಿಂದ ಬಹಳಷ್ಟು ಮಾರ್ಗದ ಬಸ್‌ಗಳು ಓಡಾಡುತ್ತಿದ್ದು, ಈ ಬಸ್‌ಗಳಲ್ಲಿ ವಿದ್ಯಾರ್ಥಿಗಳು ಶಾಖೆಗಳಿಗೆ ತೆರಳುತ್ತಿರುವ ಕಾರಣ ಹಾಗೂ ಪ್ರಯಾಣಿಕರ ಅನುಕೂಲಕ್ಕಾಗಿ ಮಾಸಿಕ/ವಾರ್ಷಿಕ ಶಾಲಾ ಪಾಸ್ ಕೌಂಟರ್ ತೆರೆಯಲು ಇಲಾಖೆಯ ಗಮನ ಹರಿಸುವುದೇ ವಿವರವಾದ ಮಾಹಿತಿ ನೀಡುವುದು.